3	ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತ	57.31
4	ಮೈಸೂರು ಟೋಬ್ಯಾಕೋ ಕಂಪನಿ ನಿಯಮಿತ	0.33
5	ಮೈಸೂರು ಮ್ಯಾಚ್ ಕಂಪನಿ ನಿಯಮಿತ	0.00
6	ಮೈಸೂರು ಎಲೆಸ್ಟ್ರಿಕಲ್ ಇಂಡಸ್ಟ್ರೀಸ್	5.00
7	ಎನ್.ಜಿ.ಇ.ಎಫ್.ಲಿಮಿಟೆಡ್	157.48
8	ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಕಂಪನಿ ನಿಯಮಿತ	*
9	ಮೈಸೂರು ಮಿನೆರಲ್ಸ್ ಲಿಮಿಟೆಡ್	5.89
10	ಮೈಸೂರು ಕಾಸ್ಟೆಟಿಕ್ಸ್ ಲಿಮಿಟೆಡ್	0.46
11	ಕರ್ನಾಟಕ ರಾಜ್ಯ ವೆನೀರ್ಸ್ ನಿಯಮಿತ	0.62
12	ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ	4.71
13	ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ ನಿಯಮಿತ	7.37
14	ಕರ್ನಾಟಕ ರಾಜ್ಯ ಜವಳಿ ನಿಯಮಿತ	6.21
15	ಕರ್ನಾಟಕ ಟೆಲಿಕಾಂ ನಿಯಮಿತ	7.00
16	ಕರ್ನಾಟಕ ಪಲ್ಪ್‌ವುಡ್ ನಿಯಮಿತ	1.27
	ಒಟ್ಟು	**301.80**

* ಕಾರ್ಖಾನೆ ಸ್ಥಗಿತಗೊಂಡಿದ್ದು, ಲಿಕ್ವಿಡೇಟರ್‌ರವರನ್ನು ನೇಮಿಸಲಾಗಿದೆ.

278(617) ಶ್ರೀ ಕ್ಯಾತಸಂದ್ರ ಎನ್.ರಾಜಣ್ಣ (ಬೆಳ್ಳಾವಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕು ಬಡವನಹಳ್ಳಿಯಲ್ಲಿ ಹಾಲಿ ಇರುವ ಪೊಲೀಸ್ ಔಟ್ ಪೋಸ್ಟ್ ಠಾಣೆಯನ್ನು ಮೇಲ್ದರ್ಜೆಗೇರಿಸಬೇಕೆಂಬ ಬೇಡಿಕೆ ಇದೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು ?

ಇ) 2004–05ನೇ ಹಣಕಾಸು ಸಾಲಿನಲ್ಲಿ ಈ ಪೊಲೀಸ್ ಔಟ್ ಪೋಸ್ಟ್ ಠಾಣೆಯನ್ನು ಮೇಲ್ದರ್ಜೆಗೇರಿಸಲಾಗುವುದು ?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಡಿ.ಜಿ. ಮತ್ತು ಐ.ಜಿ.ಪಿ. ರವರು ವಿವರವಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ.

ಆ) ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

279(439) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸವದತ್ತಿ ತಾಲ್ಲೂಕು ಮಲಪ್ರಭಾ ಎಡದಂಡೆ ಕಾಲುವೆ ಅಚ್ಚುಕಟ್ಟು ವ್ಯಾಪ್ತಿಯಲ್ಲಿರುವ 19–20 ವರ್ಷಗಳ ಹಳೆಯ ಏತ ನೀರಾವರಿ ಕಾಲುವೆಗಳನ್ನು ಪುನಶ್ಚೇತನಗೊಳಿಸಲಾಗುವುದೇ ;